ಉಮಾ ವೇದಾರ ಕಿವಿಯಲ್ಲಿ ಸಣ್ಣಗೆ, "ಸೊಸೆಂದರ ಮಾತು ಕೇಳಕೊಂಡು ಅವರ ಮಾರಿ ನೋಡಕೋತ ಇರಬೇಕಲ್ಲಾ ವೈನಿ" ಎಂದು ಪಿಸುಗುಟ್ಟಿದರು. ತಂದ ಉಪ್ಪಿಟ್ಟು ಬೇಡವಾಗಿ ಕುಡಿದ ಚಹಾ ಕಹಿ ಎನಿಸಿತು. ತಿರುಗಿದರು ಬಂದ ದಾರಿಗೆ ಸುಂಕವಿಲ್ಲದಂತೆ.

ಉದಯ, ವಿಜಯ ಪತ್ನೀಸಮೇತರಾಗಿ ಆಸಕ್ತಿಯಿಂದ, ಭಕ್ತಿಪೂರ್ವಕವಾಗಿ ಪೂಜೆ ಮಾಡಲು ಬಯಸಿದಾಗಲೇ ಅವರನ್ನು ಸೇರಿಸಿಕೊಂಡು ಅಧಿಕಾರ ಒಪ್ಪಿಸಿಕೊಟ್ಟಿದ್ದರೆ ಇಂದು ಚಿಂತಿಸುವ ಪ್ರಮೇಯವೇ ಇರುತ್ತಿರಲಿಲ್ಲ. ದೇಹದಲ್ಲಿ ಕಸುವಿರುವವರೆಗೂ ಯೋಚಿಸಲಿಲ್ಲ. ಮುಂದಾಲೋಚನೆ ಮಾಡಲಿಲ್ಲ. ಶ್ರೀಪಾದರಿಗೆ ತಮ್ಮ ತಪ್ಪಿನ ಅರಿವಾಗಿತ್ತು. ಆದರೆ ತಡವಾಗಿ...

ಕೊನೆಯ ಪ್ರಯತ್ನವೆಂದು ಗುರುನಾಥನಿಗೆ ಫೋನ್ ಮಾಡಿದರು. "ಓಹೋಹೋ... ಏನ್ ಕಾಕಾ? ಎಷ್ಟ ದಿವ್ಸದ ಮ್ಯಾಲೆ ಫೋನ್ ಮಾಡೀರಿ. ಏನೋ ಹಕೀಕತ್ತು ಇರಬೇಕಲಾ?" ಎಂದವನ ಎದುರು ಮತ್ತೆ ಪುರಾಣ ಬಿಚ್ಚಿದರು. "ನೀ ಅಂತೂ ನನಗ ಮಗಾ ಇದ್ದಂಗ ಇದ್ದಿ. ನೀನ ದತ್ತಪ್ಪನ್ನ ಇಟಗೊಂಡು ಪೂಜಿ ಮಾಡು. ಜೀವನ ಪಾವನ ಆಗ್ತದ" ಎಂದರು. ಗುರುನಾಥ ಪುಣೆ ಸೇರಿ ಹನ್ನೆರಡು ವರ್ಷಗಳಾಗಿತ್ತು. ಪಕ್ಕಾ ಪುಣೇರಿ ಸಂಸ್ಕೃತಿ ರೂಢಿಸಿಕೊಂಡಿದ್ದ. "ದೇವರ ವಿಷಯ ಬಗಿ ಹರಸ್ಲಿಕ್ಕೆ ಈ ಮಗನ ನೆನಪಾಗೇದ. ಅದೂ ಎಲ್ಲಾರೂ ಬ್ಯಾಡ ಅಂದ ಮ್ಯಾಲೆ... ಇರ್ಲಿ. ಆದರ ಗದಗದಾಗಿನ ಮನಿ ಬಗ್ಗೆ ಮಾತಾಡ್ಲೇ ಇಲ್ಲಾ. ಅದು ಪಿತ್ರಾರ್ಜಿತ ಅದಲಾ. ಅದರಾಗ ಎಲ್ಲಾರಿಗೂ ಪಾಲು ಕೊಡಬೇಕು. ಹೌದಲ್ಲೋ..." ಎಂದ. ಶ್ರೀಪಾದರಿಗೆ ಯಾರೋ ಪಕ್ಕೆಯಲ್ಲಿ ತಿವಿದಂತೆ. ಮೊದಲು ಆಘಾತದಿಂದ ತೊದಲಿದರೂ ನಂತರ ಕೋಪ ಒತ್ತರಿಸಿಕೊಂಡು ಬಂತು. "ಅಪಾ ಗುರುನಾಥಾ. ನಾ ಸಾಲಾ ಮಾಡಿ ಇಬ್ಬರು ತಂಗ್ಯಂದ್ರ ಮದವಿ ಮಾಡಿದೆ. ತಮ್ಮಂದಿರಿಗೆ ಕಲಿಸಿದೆ. ಸಾಲದಾಗ ಯಾರೂ ಪಾಲು ಕೇಳಲಿಲ್ಲ ನೋಡು. ಅಷ್ಟ ಅಲ್ಲ ನೀ ಹತ್ತ ವರ್ಷದಾಂವಿದ್ದಾಗಿಂದ ನಿನಗ ಕಲಿಸಿ, ನೌಕರಿ ಹಚ್ಚಿಕೊಟ್ಟು, ಮದವಿ ಮಾಡಿದ್ದು ನಾನ. ಆಗಿನ ಕಾಲದಾಗ ಎಷ್ಟಿತ್ತು ಮನಿ ಕಿಮ್ಮತ್ತು? ಭಾಳಂದ್ರ ಮೂವತ್ತು ಸಾವಿರ. ಪಾಲು ಮಾಡಿದ್ರೂ ಒಬ್ಬೊಬ್ಬರಿಗೆ ಆರೋ ಯೋಳೋ ಸಾವಿರ ಬರ್ತಿತ್ತು. ಅದಕ್ಕಿಂತ ಹೆಚ್ಚ ನಿಮಗ ಖರ್ಚು ಮಾಡೇನಿ. ಗೊತ್ತದಯೇನಪಾ?" ಎಂದು ವ್ಯಂಗ್ಯವಾಗಿ ಅಂಕಿ ಅಂಶಗಳ ಸಮೇತ ನಿರೂಪಿಸಿದಾಗ ಮಾತಿನ ಧಾಟಿ ಬದಲಾಯಿತು. "ಹಳೇದೆಲ್ಲಾ ಬ್ಯಾಡ ಕಾಕಾ. ಈಗ ನಾ ದೇವರು, ಪೂಜಿ ಗೀಜಿ ನಂಬೂದಿಲ್ಲ. ಮನಷಾ ಏನಿದ್ರೂ ಇನ್ನೊಬ್ಬರಿಗೆ ಉಪಕಾರ ಮಾಡಬೇಕು. ಅದ ಧೊಡ್ಡ ಪೂಜಿ. ನಾ ಒಂದ ಎನ್.ಜಿ.ಓ.ದ ಸಲವಾಗಿನೂ ಕೆಲಸಾ ಮಾಡ್ತೇನಿ. ಅದ ನನಗ ಸಾಕು" ಎಂದು ಬಿಟ್ಟ.

ಮುಖವಾಡಗಳು ಕಳಚಿದಂತೆ ರೂಪಗಳು ವಿರೂಪಗೊಂಡು ಎಲ್ಲರೂ ಬೆತ್ತಲಾಗಿ ನಿಂತಂತೆ ಭಾಸವಾಯಿತು ಶ್ರೀಪಾದರಿಗೆ. ಸಂಬಂಧಗಳ ಬಂಧದ ಅರಿವಾಗಿತ್ತು. ಇನ್ನುಳಿದವರು ತಮ್ಮ ಮಕ್ಕಳೇ. ಸುನಿತಾ ವಿದೇಶವಾಸಿ. ಅಲ್ಲದೇ "ಹೆಂಗರೆ ದಾಟಿಸಿಬಿಡ್ರಿ" ಎನ್ನುವವಳಿಗೇನು ಕೇಳುವದು? ಅನಿತಾಳನ್ನೇ ಕೇಳಬೇಕು. ಅನ್ಯಗೋತ್ರದವರಾದರೇನಂತೆ? ಅಳಿಯ ನಾಗೇಂದ್ರ ಚೆನ್ನಾಗಿ ಪೂಜೆ ಮಾಡುತ್ತಾನೆ. ಮದುವೆಯಾಗುವಾಗ ಒಳ್ಳೆಯ ಉದ್ಯೋಗದಲ್ಲಿದ್ದವನು ಸ್ವಂತ ಬಿಸಿನೆಸ್ಸಿಗೆ ತೊಡಗಿ ಕೈ ಸುಟ್ಟುಕೊಂಡಿದ್ದ. ಆರ್ಥಿಕ ತೊಂದರೆಯನ್ನನುಭವಿಸುತ್ತಾ ಈಗ ಮತ್ತೆ ಕೆಲಸಕ್ಕೆ ಸೇರಿ ಇಬ್ಬರೂ ಸಾಲ ತೀರಿಸುತ್ತಿದ್ದರು. ಅವರ ಒಬ್ಬನೇ ಮಗ ಆಕಾಶ ತಮ್ಮ ಪ್ರೀತಿಯ ಮೊಮ್ಮಗನೆಂದರೂ ಸರಿಯೇ. ಅವನಿಗೂ ತಮ್ಮ ಮೇಲೆ ಅಷ್ಟೇ ಪ್ರೀತಿ. ದತ್ತಪ್ಪನ ಮೇಲೆ ಭಕ್ತಿ. ಆಸಕ್ತಿಯಿಂದ ತನ್ನೊಂದಿಗೇ ಮಂತ್ರ ಹೇಳುತ್ತಾನೆ. ಪೂಜೆ ಮಾಡುತ್ತಾನೆ. ಮತ್ತೆ... ಭರವಸೆಯ ಬೆಳಕು ತೂರಿ ಬಂತು.